ಶ್ರೀಮತಿ ಮನೋರಮಾ ಮಧ್ವರಾಜ್.—ಸಾಮಾನ್ಯ ಪರ್ಗಾವಣೆ ಸಮಯದಲ್ಲಿ ಹಾಕುತ್ತೇವೆ,

೧೧–೩೦ ಎ. ಎಂ.

ಶ್ರೀ ಆರ್. ಎನ್. ನಾಯಕ್.—ಯಾವ ವೈದ್ಯಾಧಿಕಾರಿಗಳು ಹಳ್ಳಿಗಳಿಗೆ ಹೋಗುವುದಕ್ಕೆ ತಯಾರಿಲ್ಲವೋ ಅಂತಹವರನ್ನು ಕೆಲಸದಿಂದ ವಜಾ ಮಾಡುವುದಕ್ಕೆ ತಮಗೆ ಏನಾದರೂ ಅಧಿಕಾರ ಇದೆಯೇ ಇಲ್ಲವೇ ? ಇದರ ಬಗ್ಗೆ ಕಾನೂನು ಮಾಡುವುದಕ್ಕೆ ಸರಕಾರಕ್ಕೆ ಸಾಧ್ಯವಿದೆಯೆ ಹೇಗೆ ?

ಶ್ರೀಮತಿ ಮನೋರಮಾ ಮಧ್ವರಾಜ್.—ಕಾನೂನು ಕ್ರಮ ತೆಗೆದುಕೊಳ್ಳಬಹುದು. ಆದರೆ ಕೆಲವು ರಾಜಕೀಯ ಒತ್ತಡಗಳು ಇಲ್ಲದಿದ್ದರೆ ಸರ್ಕಾರಕ್ಕೆ ಫ್ರೀ ಹ್ಯಾಂಡ್ ಕೊಟ್ಟರೆ ಖಂಡಿತವಾಗಿ ನಾನು ಮಾಡಲಿಕ್ಕೆ ಪ್ರಯತ್ನ ಮಾಡುತ್ತೇನೆಂದು ಹೇಳಲಿಕ್ಕೆ ಇಚ್ಛೆಪಡುತ್ತೇನೆ.

ಶಿವಮೊಗ್ಗ ಜಿಲ್ಲೆಯಲ್ಲಿ ವೈದ್ಯಕೀಯ ಕಾಲೇಜಿನ ಪ್ರಾರಂಭ

೨೨. ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಶಿವಮೊಗ್ಗ ಜಿಲ್ಲೆಯಲ್ಲಿ ಮೆಡಿಕಲ್ ಕಾಲೇಜನ್ನು ಯಾವಾಗ ಪ್ರಾರಂಭ ಮಾಡಲಾಗುವುದು ?

ಶ್ರೀಮತಿ ಮನೋರಮಾ ಮಧ್ವರಾಜ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಸಹಕಾರ ಮಂತ್ರಿಗಳು).—

ಅ) ಶಿವಮೊಗ್ಗ ಜಿಲ್ಲೆಯಲ್ಲಿ ವೈದ್ಯಕೀಯ ಮಹಾವಿದ್ಯಾಲಯವನ್ನು ಪ್ರಾರಂಭಿಸಲು ಸರ್ಕಾರ ಉದ್ದೇಶಿಸಿಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಮಂತ್ರಿಗಳು ಬಹಳ ಚುಟುಕಾಗಿ ಉತ್ತರ ಕೊಟ್ಟಿದ್ದಾರೆ. ಹಿಂದೆ ಮಾನ್ಯ ಗುಂಡೂರಾಯರು ಮುಖ್ಯಮಂತ್ರಿಗಳಾಗಿದ್ದಾಗ, ಶಿವಮೊಗ್ಗದಲ್ಲಿ ಸಚಿವ ಸಂಪುಟದ ಸಭೆ ನಡೆದಾಗ ಅಲ್ಲಿ ಮೆಡಿಕಲ್ ಕಾಲೇಜನ್ನು ಪ್ರಾರಂಭ ಮಾಡಬೇಕೆಂಬ ತೀರ್ಮಾನವನ್ನು ತೆಗೆದುಕೊಂಡಿದ್ದರು. ತಮಗೆ ಗೊತ್ತಿರುವ ಹಾಗೆ ಅಲ್ಲಿ ಕುವೆಂಪು ವಿಶ್ವವಿದ್ಯಾನಿಲಯ ಇದೆ. ಹಿಂದೆ ವಿದ್ಯಾ ಸಚಿವರಾಗಿದ್ದಂತಹ ಶ್ರೀ ಬದರೀ ನಾರಾಯಣರವರು ಹತ್ತು ಲಕ್ಷ ರೂಪಾಯಿಗಳನ್ನು ಮೆಡಿಕಲ್ ಕಾಲೇಜಿಗೋಸ್ಕರ ಸಂಗ್ರಹ ಮಾಡಿ ಇಟ್ಟಿದ್ದಾರೆ. ಆದ್ದರಿಂದ ಮಾನ್ಯ ಮಂತ್ರಿಗಳು ಸಹಾನುಭೂತಿಯಿಂದ ಇದನ್ನು ಪರಿಶೀಲನೆ ಮಾಡಿ ಶಿವಮೊಗ್ಗದಲ್ಲಿ ಖಾಸಗೀ ಅಥವಾ ಸರಕಾರೀ ಮೆಡಿಕಲ್ ಕಾಲೇಜನ್ನು ತೆಗೆಯಬೇಕು. ಆ ಜಿಲ್ಲೆ ಈ ವಿಚಾರದಲ್ಲಿ ಬಹಳ ವರ್ಷಗಳಿಂದ ವಂಚಿತವಾಗಿದೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಸ್ಪಷ್ಟವಾಗಿ ಹೇಳಬೇಕು, ಸರಕಾರದ ನಿಲುವು ಏನು ಎಂಬುದನ್ನು ಹೇಳಬೇಕು.

ಶ್ರೀಮತಿ ಮನೋರಮಾ ಮಧ್ವರಾಜ್.—ಮಾನ್ಯ ಗುಂಡೂರಾವ್‌ರವರ ಸರ್ಕಾರದ ಸಚಿವ ಸಂಪುಟವು ಮೆಡಿಕಲ್ ಕಾಲೇಜನ್ನು ಶಿವಮೊಗ್ಗಕ್ಕೆ ಕೊಡುತ್ತೇವೆಂದು ಹೇಳಿದ್ದಾರೆ ಎಂದು ಮಾನ್ಯ ಸದಸ್ಯರು ಹೇಳಿದರು. ಆದರೆ ಇಲ್ಲಿ ಈಗ ಇರುವುದು ಶ್ರೀ ವೀರೇಂದ್ರ ಪಾಟೀಲರ ಸರಕಾರ. ಆದ್ದರಿಂದ ನವಂಗೆ ಆ ಉದ್ದೇಶ ಇಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ.—ತಮ್ಮ ಸರಕಾರವೇನಾದರೂ ಮುಂದೆ ಬರುವಂತಹ ದಿವಸಗಳಲ್ಲಿ ಈ ರಾಜ್ಯದಲ್ಲಿ ಖಾಸಗೀ ಅಥವಾ ಸರಕಾರೀ ಮೆಡಿಕಲ್ ಕಾಲೇಜುಗಳನ್ನು ತೆಗೆಯಬಾರದೆಂದು ನಿಶ್ಚಯವನ್ನೇನಾದರೂ ಮಾಡಿದ್ದೀರಾ ? ಈ ವಿಷಯದ ಬಗ್ಗೆ ಸರಕಾರದ ಪಾಲಿಸಿ ಏನು ?

ಶ್ರೀಮತಿ ಮನೋರಮಾ ಮಧ್ವರಾಜ್.—ಅಂಥಾದ್ದೇನೂ ಇಲ್ಲ. ಸಧ್ಯಕ್ಕೆ ಅಂತಹ ಉದ್ದೇಶ ಇಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಪರಿಶೀಲನೆ ಮಾಡುತ್ತೀರಾ ? ಇಲ್ಲವೇ ಶಿವಮೊಗ್ಗ ಜಿಲ್ಲೆಯನ್ನು ಪುರೆಯುತ್ತೀರಾ ? ಮಾನ್ಯ ಬಸವಲಿಂಗಪ್ಪನವರಿಗೆ ಇದರ ಬಗ್ಗೆ ಇಂಟರೆಸ್ಟ್ ಇದೆ ಎಂದು ನನಗೆ ಗೊತ್ತು. ತಾವು ನನ್ನ ಸಹಾಯಕ್ಕೆ ಬನ್ನಿ.

ಶ್ರೀ ಕೆ.ಎಸ್. ಈಶ್ವರಪ್ಪ.—ಸ್ವಾತಂತ್ರ್ಯ ಬಂದಾಗಿನಿಂದ ಇಲ್ಲಿಯವರೆಗೆ ಶಿವಮೊಗ್ಗ ಜಿಲ್ಲೆಯಿಂದ ಅನೇಕ ಮಂತ್ರಿಗಳು ಬಂದಿದ್ದಾರೆ. ಆದರೂ ಕೂಡ ಶಿವಮೊಗ್ಗ ಜಿಲ್ಲೆಯಲ್ಲಿ ಮೆಡಿಕಲ್ ಕಾಲೇಜನ್ನು ಪ್ರಾರಂಭ ಮಾಡಿಲ್ಲ. ಮೆಡಿಕಲ್ ಕಾಲೇಜಿನ ಬಗ್ಗೆ ಮಲತಾಯಿ ಧೋರಣೆಯನ್ನು ಏಕೆ ಮಾಡುತ್ತೀರೋ ನನಗೆ ಗೊತ್ತಿಲ್ಲ. ಈ ಮಲತಾಯಿ ಧೋರಣೆಯನ್ನು ಬದಿಗೊತ್ತಿ ಈ ಸಲವಾದರೂ ಶಿವಮೊಗ್ಗ ಜಿಲ್ಲೆಗೆ ಮೆಡಿಕಲ್ ಕಾಲೇಜನ್ನು ಕೊಡುವ ಬಗ್ಗೆ ತಾವು ಗಮನ ಕೊಡಬೇಕು.

ಬೀದರ್ ಜಿಲ್ಲೆಯಲ್ಲಿ ಹೈನು ಅಭಿವೃದ್ಧಿ ಯೋಜನೆ

೨೨೦. ಶ್ರೀ ನಾರಾಯಣರಾವ್ ಮನಹಳ್ಳಿ (ಬೀದರ್).—ಮಾನ್ಯ ಗ್ರಾಮೀಣಾಭಿವೃದ್ಧಿ, ಪಂಚಾಯತ್‌ರಾಜ್ ಹಾಗೂ ಪಶು ಸಂಗೋಪನೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೀದರ್ ಜಿಲ್ಲೆಯಲ್ಲಿ ಹಾಲು ಉತ್ಪಾದನೆಗೆ ವಿಪುಲ ಅವಕಾಶಗಳು ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ಸರ್ಕಾರವು ಈ ಜಿಲ್ಲೆಯಲ್ಲಿ ಹಾಲು ಪುಡಿ ಘಟಕವನ್ನು ಸ್ಥಾಪಿಸುವ ಬಗ್ಗೆ ಪರಿಗಣಿಸಿದೆಯೇ ?

ಶ್ರೀ ಬಿ ಬಸವಲಿಂಗಪ್ಪ (ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್ ಮತ್ತು ಪಶು ಸಂಗೋಪನಾ ಸಚಿವರು).—

ಅ) ಬೀದರ್ ಜಿಲ್ಲೆಯಲ್ಲಿ ದಿನವೊಂದಕ್ಕೆ ಸುಮಾರು ೬೦,೦೦೦ ಲೀಟರ್ ಹಾಲು ಉತ್ಪಾದನೆಯಾಗುತ್ತಿದೆಯೆಂದು ಅಂದಾಜು ಮಾಡಲಾಗಿದೆ.

ಆ) ಈ ಜಿಲ್ಲೆಯಲ್ಲಿ ಲಭ್ಯವಿರುವ ಹಾಲು ಗುಲ್ಬರ್ಗಾ ಮತ್ತು ಬೀದರ್ ಜಿಲ್ಲೆಗಳ ಗ್ರಾಹಕರ ಬೇಡಿಕೆ ಪೂರೈಸಲು ಸಾಲದ್ದರಿಂದ ಬೀದರ್ ಜಿಲ್ಲೆಯಲ್ಲಿ ಹಾಲು ಪುಡಿ ಘಟಕವನ್ನು ಸ್ಥಾಪಿಸುವ ಅಗತ್ಯ ಇರುವುದಿಲ್ಲ.

ಶ್ರೀ ನಾರಾಯಣರಾವ್ ಮನಹಳ್ಳಿ.—ಸನ್ಮಾನ್ಯ ಅಧ್ಯಕ್ಷರೇ, ೬೦,೦೦೦ ಲೀಟರ್ ಹಾಲು ಬೀದರ್‌ನಲ್ಲಿ ಉತ್ಪಾದನೆಯಾಗುತ್ತಿದೆ ಎಂದು ಮಾನ್ಯ ಮಂತ್ರಿಗಳು ಅಂದಾಜು ಫಿಗರ್ಸ್ ಕೊಟ್ಟಿದ್ದಾರೆ. ಇದಕ್ಕೂ ಹೆಚ್ಚು ಅಂದರೆ ಸುಮಾರು ೨ ೫೦,೦೦೦ ಲೀಟರ್ ಹಾಲಿನ ಉತ್ಪಾದನೆ ಬೀದರ್ ಜಿಲ್ಲೆಯಲ್ಲಿ ಆಗುತ್ತಿದೆ. ಹಾಲು ಉತ್ಪಾದನೆ ಮಾಡುತ್ತಿರುವ ರೈತರು ತಮ್ಮ ಹಾಲನ್ನು ಸಮೀಪವಿರುವಂತಹ ಮಹಾರಾಷ್ಟ್ರ ಹಾಗೂ ಆಂಧ್ರಕ್ಕೆ ಒಯ್ಯುತ್ತಿದ್ದಾರೆ ಅಲ್ಲಿ ಸಾಕಷ್ಟು ಹಾಲನ್ನು ಉತ್ಪಾದನೆ ಮಾಡುತ್ತಿದ್ದಾರೆ. ರೈತರಿಗೆ ಅನುಕೂಲವಾಗುವಂತೆ ಕೂಲಿ ಕಾರ್ಮಿಕರಿಗೆ ಸಹಾಯವಾಗುವಂತೆ ಅಲ್ಲಿ ಹಾಲು ಪುಡಿ ಘಟಕವನ್ನು ಪ್ರಾರಂಭ ಮಾಡಿದರೆ ಅವರು ಪೂರಾಟ ಮಾಡತಕ್ಕಂತಹ ಹಾಲಿಗೆ ಸರಿಯಾದಂತಹ ಬೆಲೆ ಸಿಗುವಂತಹ ನಿರೀಕ್ಷೆ ಇದೆ. ಆದ್ದರಿಂದ ಮಾನ್ಯ ಮಂತ್ರಿಯವರು ಇದನ್ನು ಸ್ಥಾಪನೆ ಮಾಡುವ ಬಗ್ಗೆ ವಿಚಾರ ಮಾಡುತ್ತಾರೆಯೇ ?

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಕೇಳತಕ್ಕ ವಿಷಯ ಸರ್ಕಾರದ ಗಮನದಲ್ಲಿದೆ. ನಾನು ಜನವರಿ ೨೬ರಂದು ರಿಪಬ್ಲಿಕ್ ಡೇ ದಿವಸ ಬೀದರ್‌ಗೆ ಹೋಗಿ ಭಾಷಣ ಮಾಡುವಾಗ ಅಲ್ಲಿ ಹಾಲಿನ ಘಟಕವನ್ನು ಸ್ಥಾಪನೆ ಮಾಡಬೇಕು ಹಾಗೂ ಅಲ್ಲಿ ಹೆಚ್ಚು ಹೆಚ್ಚು ಹಾಲನ್ನು ಉತ್ಪಾದನೆ ಮಾಡಬೇಕೆಂದು ಹೇಳಿದ್ದೆ. ಹಾಲು ಉತ್ಪಾದನೆ ಮಾಡತಕ್ಕದ್ದು ತಾಯಂದಿರು. ಕೈಯಲ್ಲಿರತಕ್ಕದ್ದು. ಬೀದರ್ ಜಿಲ್ಲೆಯಲ್ಲಿ ವಿಶೇಷವಾಗಿ ತಾಯಂದಿರ ಸೊಸೈಟಿಗಳನ್ನು ಮಾಡಿದ್ದೇವೆ. ಮದರ್ ಕೋ ಆಪರೇಟಿವ್ ಸೊಸೈಟಿಗಳನ್ನು ನಾನು ಪ್ರಾರಂಭ ಮಾಡಿದ್ದೇನೆ. ತಾಯಂದಿರು ಮನೆಯ ಜವಾಬ್ದಾರಿಯನ್ನು ನಡೆಸಿಕೊಂಡು ಹೋಗುತ್ತಿರುತ್ತಾರೆ. ಆದರೆ ಮಕ್ಕಳನ್ನು ಸಾಕುವುದು ಅವರನ್ನು ಶಾಲೆಗಳಿಗೆ ಕಳುಹಿಸುವ ಜವಾಬ್ದಾರಿ ತಾಯಂದಿರ ಮೇಲಿರುತ್ತದೆ. ಆದ್ದರಿಂದ ನೇರವಾಗಿ ತಾಯಿ ಕೈಯಲ್ಲಿ ಹಣಸಿಗುವಂತೆ ವ್ಯವಸ್ಥೆ ಮಾಡಬೇಕೆಂಬ ಉದ್ದೇಶದಿಂದ ಈ ರೀತಿ ಕ್ರಮ ತೆಗೆದು ಕೊಳ್ಳಲು ಪ್ರಯತ್ನ ಮಾಡುತ್ತಿದ್ದೇವೆ. ಬೀದರ್ ಜಿಲ್ಲೆಯಲ್ಲಿ ಈ ತಾಯಂದಿರ ಸೊಸೈಟಿಗಳನ್ನು